ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಉತ್ತರ ಕರ್ನಾಟಕದ ಖಾಸಗಿ ಕಾಲೇಜುಗಳಲ್ಲಿ ಹೆಚ್ಚಿನ ಶುಲ್ಕವನ್ನು ವಿದ್ಯಾರ್ಥಿಗಳಿಂದ ತೆಗೆದುಕೊಳ್ಳುತ್ತಿರುವುದರ ಬಗ್ಗೆ ಮತ್ತು ಅಲ್ಲಿನ ಅಧ್ಯಾಪಕರಿಗೆ ಕೊಡುವ ವೇತನದ ಬಗ್ಗೆ ನಾನು 10-12 ದಿವಸದಿಂದ ಹೇಳುತ್ತಿದ್ದರೂ ಸರ್ಕಾರ ಏನೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಇರುವುದರಿಂದ ನಾವು ಏನು ಮಾಡಬೇಕು ?

ಅಧ್ಯಕ್ಷರು.—ತಾವು ಪ್ರತಿ ದಿವಸ ನಿಂತುಕೊಂಡು ಅದನ್ನೇ ಕೇಳುತ್ತಿದ್ದರೆ ತಾವು ಕಳುಹಿಸಿರುವುದಕ್ಕೆ ಸ್ಯಾಂಕ್ಷನ್ ಹೋಗುತ್ತದೆ.

ಶ್ರೀ ಪಾಟಾಳ್ ನಾಗರಾಜ್.—ಸರ್ಕಾರಕ್ಕೆ ಇದರ ಬಗ್ಗೆ ಗಮನವಿದೆಯೇ ? ಈವೊತ್ತಿನ ದಿವಸ ನನಗೆ ತಿಳಿದ ಹಾಗೆ, ಕೇಳಿದ ಹಾಗೆ, ಪ್ರತಿಕೆಯಲ್ಲಿ ಓದಿದ ಹಾಗೆ ಪರಿಸ್ಥಿತಿಯು ಅಲ್ಲಿ ಉಲ್ಬಣ ಸ್ಥಿತಿಗೆ ಬರುತ್ತದೆ. ಸರ್ಕಾರ ನಿಧಾನ ಮಾಡಿದರೆ ವಿದ್ಯಾರ್ಥಿಗಳು ಇನ್ನು ಬೇರೆ ರೀತಿಯ ಕ್ರಮ ಪ್ರಾರಂಭ ಮಾಡುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದಾರೆ. ಅಲ್ಲಿ ಕೋಷಣೆ ಆಗುತ್ತದೆ, ಆದ್ದರಿಂದ ಇದನ್ನು ತಪ್ಪಿಸಲಿಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ತಾವು ಸರ್ವಜ್ಞರೆಂದು ತಿಳಿದುಕೊಂಡು ಪ್ರತಿಯೊಂದು ವಿಷಯದಲ್ಲೂ ಮಾತನಾಡಿದರೆ ಹೇಗೆ !

ಶ್ರೀ ಪಾಟಾಳ್ ನಾಗರಾಜ್.—ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ಏರೋದ ಪ ದವರು ಸರ್ಕಾರ ಮಾಡತಕ್ಕ ತಪ್ಪು ಎತ್ತಿ ಹಿಡಿಯುತ್ತಾರೆ. ಅಡಳಿತ ಕಾಂಗ್ರೆಸ್ಸಿನ ಸದಸ್ಯ ರಾಗಿದ್ದರೆ, ಈ ಕಡೆ ಇದ್ದಾಗ ನಮ್ಮನೆ ಕೊತುಕೊಳ್ಳುತ್ತಿದ್ದರೇ ?

ಅಧ್ಯಕ್ಷರು.—ಏನು ಹೇಳಬೇಕಾದರೂ ಜವಾಬ್ದಾರಿಯಿಂದ ಹೇಳಬೇಕು. ಯಾರಾದರೂ ಒಂದು ವಿಷಯದ ಮೇಲೆ ಮಾತನಾಡಿದರೆ, ತಾವೂ ಮಾತನಾಡಬೇಕ ಎದ್ದು ನಿಲ್ಲುವುದು ಸರಿಯಲ್ಲ.

ಶ್ರೀ ಪಾಟಾಳ್ ನಾಗರಾಜ್.—ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಇದೇ ವಿಷಯದಲ್ಲಿ ಈ ದಿವಸ, ಹ ಬ್ಳಿ ಮತ್ತು ಧಾರವಾಡ ನಗರ ನಿಯೋಗ ಬಂದಿತ್ತು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಕ್ಕೆ ನಿಯೋಗದ ಜೊತೆಯಲ್ಲಿ ನಾನು ಹೋಗಿದ್ದೆ. ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಇದರ ಬಗ್ಗೆ ಒಂದು ಕಾರ್ ಅಟೆನ್ಷನ್ ನೋಟೀಸನ್ನು 10 ದಿವಸದ ಹಿಂದೆ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಕ್ರಮ ತಗೆದು ಕೊಂಡಿದ್ದೀರಾ ? ಇಲ್ಲಿ ಬಂದಿರತಕ್ಕ ಪ್ರಶ್ನೆ, ಏನೆಂದರೆ, ಈ ತಿಂಗಳ 15ನೇ ತಾರೀಖಿಗೆ ಅಡ್ಮಿಷನ್ ಕ್ಲೋಸ್ ಆಯಿತು. ಪ್ರೈವೇಟ್ ಕಾಲೇಜಿನವರು 200 ರೂಪಾಯಿಗಳಿಂದ 400 ರೂಪಾಯಿಗಳವರೆಗೆ ಅಡ್ಮಿಷನ್ ಫೀಸ್ ನಿರಿಸಿದ್ದಾರೆ. ಈ ದೃಷ್ಟಿಯಿಂದ ಇದು ಪ್ರಾಮುಖ್ಯತಾ ವಿಷಯ. ಆದ್ದರಿಂದ ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಇದು ನಾಳೆ ಅಥವಾ ಸೋಮವಾರದ ಕಾರ್ಯಕ್ರಮ ಪಟ್ಟಿಯಲ್ಲಿ ಬರುವ ಹಾಗೆ ಮಾಡಬೇಕು, ಇಲ್ಲಿಡೆ ಹೋದರೆ, ಅಲ್ಲಿ ಪ್ರದರ್ಶನ ಆಗಿ ಅಸ್ತಿಪಾಸ್ತಿಗಳಿಗೆ ನಷ್ಟವಾಗುವ ಸಂದರ್ಭ ಇದೆ. ಇದನ್ನು ತಪ್ಪಿಸಬೇಕಾಗಿದೆ ಇದಕ್ಕಾಗಿ ತಾವು ಶೀಘ್ರವಾಗಿ ಕ್ರಮ ತಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ. ಎಸ್. ಕೃಷ್ಣನ್.—ವಿದ್ಯಾ ಮಂತ್ರಿಗಳು ಇಲ್ಲದೆ ಇರುವುದರಿಂದ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಮಲ್ಲೇಶ್ವರಂ ಗವರ್ನಮೆಂಟ್ ಜೂನಿಯರ್ ಕಾಲೇಜಿನ ಕಟ್ಟಡವನ್ನು ಪ್ರೈವೇಟ್ ಕಾಲೇಜನ್ನು ಓಪನ್ ಮಾಡಲಕ್ಕೆ ಕೊಟ್ಟಿದ್ದಾರೆ. ಈ ತರಹ ಥೋರಣೆ ತಾಳುವುದು ಸರಿಯಲ್ಲ. ಗವರ್ನಮೆಂಟ್ ಕಟ್ಟಡವನ್ನು ಪ್ರೈವೇಟ್ ಇನ್ಸ್‌ಟಿಟ್ಯೂಷನ್‌ಗೆ ಕೊಡುವುದು ಅರ್ಥವಿಲ್ಲದ ಮಾತು. ಇದು ಒಂದು ಪಾಲಸಿಯ ಪ್ರಶ್ನೆ. ಆದರಿಂದ ಇದನ್ನು ಸರ್ಕಾರದ ಗಮನಕ್ಕೆ ತರ ತಿದ್ದೇನೆ.

Drought Conditions in Bijapur and other Districts—Statement of Chief Minister

ಶ್ರೀ ಜಿ. ಎನ್. ಪಾಟೀಲ್.—ಬಿಜಾಪುರ ಜಿಲ್ಲೆಯಲ್ಲಿ ದುಷ್ಕಾಲ ಕಾಮಗಾರಿಯ ನಲುವಾಗಿ 10-15 ದಿವಸಗಳ ಹಿಂದೆ ಒಂದು ಕಾರ್ ಅಟೆನ್ಷನ್ ನೋಟೀಸ್ ಕಳಿಹಿಸಿದೆ. ಇವತ್ತಿನವರೆಗೆ ಅದಕ್ಕೆ ಉತ್ತರ ಬಂದಿಲ್ಲ. ಅಲ್ಲಿಯ ಪರಿಸ್ಥಿತಿ ನೋಡಿದರೆ ತೀರಾ ಹದಗೆಟ್ಟಿದೆ. ಆದ್ದರಿಂದ ಮುಖ್ಯಮಂತ್ರಿಗಳು ಈ ಬಗ್ಗೆ ಏನಾದರೂ ಉತ್ತರ ಕೊಡುತ್ತಾರೆಯೇ ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಬಿಜಾಪುರ ಜಿಲ್ಲೆಯಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಅದರ ನಲುವಾಗಿ, ಇನ್ನೂ ಏನೂ ವಿಚಾರ ಮಾಡಿಲ್ಲ ಎಂದು ಕಾಣುತ್ತದೆ, ಎಷ್ಟೋ ಜನ ಬಹಳ ಕಷ್ಟದಲ್ಲಿದ್ದಾರೆ ಎಂದು ನಾವು ಹೇಳುತ್ತಲೇ ಇದ್ದೇವೆ, ನೀವು ಕೇಳುತ್ತಲೇ ಇದ್ದೀರಿ. ಏನೋ ಕ್ರಮತೆಗೆದುಕೊಳ್ಳುತ್ತೀರಿ ಎಂದು ಇಲ್ಲಿಯವರೆಗೆ ಸಮಾಧಾನಪಟ್ಟುಕೊಂಡಿದ್ದೆವು. ಈಗ ಸಹನೆ ಮೀರಿ ಹೋಗಿದೆ. ನಾಳೆ ತಾವು ಈ ಬಗ್ಗೆ ಕ್ರಮತೆಗೆದುಕೊಳ್ಳದಿದ್ದರೆ, ಬಿಜಾಪುರ ಜಿಲ್ಲೆಯ ಪ್ರತಿನಿಧಿಗಳು ಇಲ್ಲಿ ಸತ್ಯಾಗ್ರಹ ಮಾಡುತ್ತೇವೆ ಎಂದ ತಮ್ಮ ಮೂಲಕ ಹೇಳ ತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಿಗೆ ಪರಿಸ್ಥಿತಿಯ ಬಗ್ಗೆ ಇರುವಷ್ಟು ಕಾಳಜಿರತೆ ಸರ್ಕಾರಕ್ಕೂ ಕೂಡ ಇದೆಯೆಂದು ಇಷ್ಟು ಮಾತ್ರ ಹೇಳಬಲ್ಲೆ. ಅಲ್ಲಿ ಏನಾದರೂ ಆಗಲೇ ಎಂದು ನಾವೇನೂ ಇರುತ್ತೇವೆಯೇ ? ನಾವು ಆಗಿಂದಾಗ್ಗೆ ರಿಪೋರ್ಟ್ ತರಿಸಿಕೊಳ್ಳುತ್ತೇವೆ. ಅಲ್ಲಿನ ಡಿಪ್ಯೂಟಿ ಕಮಿಷನರ್ ಬಂದು ನನ್ನನ್ನು ನೋಡಿದ್ದಾರೆ. ಈಗ ಇಮ್ಮೀಡಿಯಟ್ ಆಗಿ ಕ್ರಮ ತಗೆದು ಕೊಳ್ಳುವುದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಮುಖ್ಯ ಹೊಳೆ ಮತ್ತು ಬಾಡ್ರಾ ಮೂರು ಸಾವಿರ ಟನ್ ರಿಲೀಸ್ ಮಾಡಿದ್ದೇವೆ. ಜೊಳ್ಳ-ಸಾ ಕ್

(ಶ್ರೀ ಡಿ. ದೇವರಾಜ ಅರಸ್)

ಇಲ್ಲ ಎಂದು ನನಗೆ ಗೊತ್ತಿದೆ. ಆದ್ದರಿಂದ ಎಷ್ಟು ಬೇಕಾದರೂ ಗೋಧಿಯನ್ನು ಕಳುಹಿಸಿಕೊಡುತ್ತೇವೆ. ಬಾಜ್ರಾ ಮತ್ತು ಜೋಳ ಕಟ್ಟು ಹೋಗುತ್ತವೆ, ಎಂದು ಟೆಂಡರ್ ಕರೆದು ಕೊಟ್ಟು ಬಿಡಬೇಕೆಂದಿದ್ದೆವು. ಈಗ ಟೆಂಡರ್ ಕರೆದು ಭೇರೆಯವರಿಗೆ ಕೊಡೋಣ ಎಂದು ಇದ್ದುದನ್ನು ನಿಲ್ಲಿಸಿ, ಬಿಜಾಪುರ ಜಿಲ್ಲೆಗೆ ಕಳುಹಿಸಿಕೊಡಿ ಎಂದು ಹೇಳಿದ್ದೇವೆ. ಆಹಾರಧಾನ್ಯಗಳ ಫ್ರೈಸ್ ಜಾಸ್ತಿಯಾಗುತ್ತಿರುವುದರಿಂದ ಇದನ್ನು ನಾವು ಹಂಚುವುದಕ್ಕೆ ಬೇಗ ವ್ಯವಸ್ಥೆ ಮಾಡುತ್ತೇವೆಂದು ನಿನ್ನೆಯ ದಿವಸ ಹೇಳಿದ್ದೇನೆ. ಇನ್ನು 10 ಲಕ್ಷ ರೂಪಾಯಿನಲ್ಲಿ ಕಾರ್ಯ ಮಾಡುವುದರ ಜೊತೆಗೆ ಕೆಲವು ಕಡೆ, ನಾರಾ ಕೆಲಸಗಳು ಆಗಬೇಕು. ಕೃಷ್ಣಾ ಯೋಜನೆಯ ಒಳಗಡೆ ಇರತಕ್ಕ ನಾರೆ, ಇಂಡಿಗಿ ತಾಲ್ಲೂಕು ಸಿಂಧಗಿಗೆ ಬರುವುದಿದೆ. ಆ ಭಾಗದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೂಡ ನೋಡಿಸುತ್ತಿದ್ದೇವೆ. ಈ ಕೆಲಸಗಳನ್ನು ಅಲ್ಲಿ ಶುರು ಮಾಡಿದರೆ ಜನರಿಗೆ ಸ್ವಲ್ಪ ಹೆಚ್ಚಾಗಿ ಕೆಲಸ ಸಿಕ್ಕುತ್ತದೆ. ಇನ್ನು ಕೆಲವರು, ಸಲಹೆ ಕೊಟ್ಟರು, ಟ್ಯಾಂಕ್ ವರ್ಕ್ಸ್ ಮಾಡುವುದಕ್ಕೆ ಸಾಧ್ಯವಿದೆ ಎಂದು. ಟ್ಯಾಂಕ್ ಕೆಲಸಗಳಿಗೆ ಎಸ್ಟಿಮೇಟ್ಸ್ ಏನು ಪಂದೆ ಆಗಿವೆ ಅವುಗಳನ್ನು ತೆಗೆದು ಕೊಳ್ಳುವ ಪಾಸಿಬಿಲಿಟೀಸ್ ಇದೆಯೇ ಎಂದು ನೋಡಿ, ಸಾಧ್ಯವಾದರೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇವೆ. ಅವರು ಸುಮ್ಮನೆ ಹೇಳುತ್ತಿದ್ದಾರೆ, ನಮ್ಮ ಪಾಡಿಗೆ ನಾವು ಸುಮ್ಮನೆ ಇದ್ದೇವೆ ಎಂದಲ್ಲ. ಮತ್ತೆ ಮಾನ್ಯ ಸದಸ್ಯರು ಒಂದು ಡಿಫಿಕಲ್ಟಿ ಹೇಳಿದರು. ಡ್ರಿಂಕಿಂಗ್ ವಾಟರ್‌ಗೋಸ್ಕರ ಬೋರ್ ವೆಲ್ಸ್‌ಗಳನ್ನು ತೆಗೆಯುವುದಕ್ಕೆ ಸಾಕಷ್ಟು ರಿಗ್ಸ್ ಇಲ್ಲ, ಈ ಡಿಸ್ಟ್ರಿಕ್ಟ್‌ಗೆ ಕೊಟ್ಟಿದ್ದ ರಿಗ್ಸ್, ಧಾರವಾಡದಲ್ಲಿ ಉಳಿದುಬಿಟ್ಟಿವೆ, ಅದನ್ನು ತರಿಸಬೇಕು ಎಂದು ಹೇಳಿದರು. ನಾನು ನಿನ್ನೆ ಕಾಂಟ್ಯಾಕ್ಟ್ ಮಾಡಿ, ರಿಗ್ಸ್ ಅನ್ನು ಮೂವ್ ಮಾಡುವುದಕ್ಕೆ ಹೇಳಿದ್ದೇನೆ. ಎಲ್ಲಿ ತೊಂದರೆ ಇದೆ ಅಲ್ಲಿ, ಬೋರ್ ವೆಲ್ಸ್ ಹಾಕಿಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡೋಣ. ನಿನ್ನೆ ಈ ವಿಷಯದ ಬಗ್ಗೆ ನಿಮ್ಮ ಜಿಲ್ಲೆಯ ಜಿಲ್ಲಾ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ.

ಶ್ರೀ ಜೆ. ಎಸ್. ಕಬ್ಬಾರಿ.—ಡ್ರಾಟ್ ಕಂಡಿಷನ್ ನಲುವಾಗಿ 10 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. ಈ ಹತ್ತು ಲಕ್ಷ ರೂಪಾಯಿ ಎಲ್ಲಾ ಕಡೆ ಕೆಲಸ ಮಾಡುವುದಕ್ಕೆ ಸಾಲುವುದಿಲ್ಲ. ಈಗ ಎಲ್ಲಾ ಭಾಗಗಳನ್ನು ಕವರ್ ಮಾಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇದು ನಮಗೆ 10 ಲಕ್ಷ ರೂಪಾಯಿ ಕೊಡುವ ಪ್ರಶ್ನೆಯಲ್ಲ, ಎಲ್ಲಾ ಕಡೆ ಕೆಲಸ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಕ್ಷಣ ಆರ್ಡರ್ ಮಾಡಿ, ಎಂದು ಹೇಳುವುದು ಮುಖ್ಯವಾದ ವಿಚಾರವಾಗಿದೆ.

3-00 P.M.

Sri B. B. SAYANAK.—I want to know the law and order situation in Belgaum.

Sri D. DEVARAJ URS.—I will get the report and I will try to see that law and order situation there is brought under control.

Agreement on the Projects over the Cauvery River Basin

†ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಒಂದು ವಿವರಣೆಯನ್ನು ಅವರಿಂದ ತಿಳಿದುಕೊಳ್ಳಬೇಕೆಂದು ಇದ್ದೇನೆ. ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯವರು ಕೇರಳಕ್ಕೆ ಹೋಗಿದ್ದಾರೆ. ಕಮಿಟಿ ಸದಸ್ಯರಾದ ಶ್ರೀ ಅಹುಜಾ ಅವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಕೇಂದ್ರದಿಂದ ಕ್ಲಿಯರ್ ಆಗದೆ ಇರತಕ್ಕ ಪ್ರಾಜೆಕ್ಟ್‌ಗಳನ್ನು ನಿಲ್ಲಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಮತ್ತು ಕಾವೇರಿ ಪ್ರಾಜೆಕ್ಟ್ ಆಗುತ್ತಾ ಇರುವ ವಿಷಯ ಗೊತ್ತಿಲ್ಲ ಎಂದು ಅವರು ತಿಳಿಸಿದ್ದಾರೆ. ಅದಕ್ಕೆ ನಮ್ಮ ರಾಜ್ಯದ ನೀರಾವರಿ ರಾಜ್ಯ ಸಚಿವರು ಮತ್ತು ಮುಖ್ಯಮಂತ್ರಿಗಳು ಹಾಗೆ ಒಪ್ಪಿಗೆ ಕೊಟ್ಟಿಲ್ಲ ಎನ್ನುವುದನ್ನು ಹೇಳಿದ್ದಾರೆ. ಹಿಂದೆ ಪ್ರಸ್ತಾಪ ಮಾಡಿದಾಗ "at the appropriate time I am going to make a statement" ಎಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ಗೊಂದಲ ಪ್ರಾರಂಭವಾಗಿದೆ. ಸಂಬಂಧಪಟ್ಟ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿ ಸದಸ್ಯರು, ಮೂರು ರಾಜ್ಯದ ಮುಖ್ಯಮಂತ್ರಿಗಳು ಕಾವೇರಿ ಬೇಸಿನ್‌ನಲ್ಲಿ

ಕ್ಲಿಯರ್ ಆಗದೆ ಇರುವ ಪ್ರಾಜೆಕ್ಟ್‌ಗಳನ್ನು ತಡೆಹಿಡಿಯುತ್ತಾರೆ ಎಂದು ತಿಳಿಸಿದ್ದಾರೆ. ಕಾಕತಾಳ ನ್ಯಾಯ ಇದ್ದಹಾಗೆ ಹೇಮಾವತಿ ಪ್ರಾಜೆಕ್ಟ್‌ನ್ನು ನಾವು ನೋಡಿಕೊಂಡು ಬಂದಿದ್ದೇವೆ, ಪ್ರಾಜೆಕ್ಟ್ ಕೆಲಸ ಸ್ಥಗಿತವಾಗಿದೆ, ಕಾರ್ಯಗಳನ್ನು ನಿಲ್ಲಿಸತಕ್ಕ ಬಗ್ಗೆ ನರ್ಕಾರ ಪರೋಕ್ಷವಾಗಿ ಆದೇಶ ಕೊಟ್ಟ ಹಾಗೆ ಕಾಣುತ್ತದೆ. ಪರಿಸ್ಥಿತಿ ಹೀಗಿರುವಾಗ ಮುಖ್ಯಮಂತ್ರಿಗಳು ಸಭೆಯಲ್ಲಿ ಈ ಪ್ರಾಜೆಕ್ಟ್ ತಡೆ ಹಿಡಿಯುತ್ತೇವೆ ಎಂದು ಒಪ್ಪಿಕೊಂಡಿರುವುದು ನಿಜವೇ! ಇದನ್ನು ಏಕೆ ಹೇಳುತ್ತೇನೆ ಎಂದರೆ ಕಮಿಟಿ ಸದಸ್ಯರೇ ಈ ಮಾತು ಹೇಳಿದ್ದಾರೆ. ಆದ್ದರಿಂದ ನಮಗೆ ಸ್ಪಷ್ಟವಾಗಿ ಈ ವಿಚಾರದಲ್ಲಿ ಹೇಳಿಕೆ ಕೊಡ ಬೇಕು ಮತ್ತು ನಮ್ಮ ಮನಸ್ಸಿನಲ್ಲಿರುವ ಸಂಶಯವನ್ನು ನಿವಾರಣೆಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.—ಒಂದೊಂದು ಸಾರಿ ಒಂದೊಂದು ಪತ್ರಿಕೆಗಳಲ್ಲಿ ಒಂದೊಂದು ವರದಿ ಬರುವುದರಿಂದ ಈ ತರಹ ಅನುಮಾನ ಬರುವುದಕ್ಕೆ ಕಾರಣವಾಗಿದೆ. ನಾನು ಪತ್ರಿಕೆಯನ್ನು ನೋಡಿದೆ. ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಸದಸ್ಯರು ಇದರ ಬಗ್ಗೆ ಮಾತನಾಡುವ ಅಗತ್ಯ ಇರಲಿಲ್ಲ, ಯಾವ ಸಂದರ್ಭಕ್ಕೆ ಏನು ಹೇಳಿದರೋ, ರಿಪೋರ್ಟರ್ಸ್ ಏನು ಬರೆದುಕೊಂಡರೋ ಆ ಸಂದರ್ಭ ನನಗೆ ಗೊತ್ತಿಲ್ಲ. ಏನೇ ಆದರೂ ಓದಿದವರಿಗೆ ಹಾಗೆಯೇ ಕಾಣುತ್ತದೆ. ತಾವು ಅಗ್ರಿಮೆಂಟ್ ಏನು ಇದೆ ಎಂಬುದನ್ನು ಪತ್ರಿಕೆಯಲ್ಲಿ ಓದಿದ್ದೀರಿ ಎಂದು ಕಾಣುತ್ತದೆ. I have got a copy of it with me. ಮೂರು ಜನರು ಸೈನ್ ಮಾಡಿದ್ದು, ಒಬ್ಬೊಬ್ಬರ ಹತ್ತಿರ ಒಂದೊಂದು ಕಾಪಿ ಇಟ್ಟುಕೊಂಡಿದ್ದೇವೆ, ನನ್ನ ಸಿಗ್‌ನೇಚರ್ ಇದೆ, ಕೇರಳ ಮತ್ತು ತಮಿಳು ನಾಡು ಚೀಫ್ ಮಿನಿಸ್ಟರ್ ಮತ್ತು ಶ್ರೀ ಕೆ. ಎಲ್. ರಾವ್ ಅವರು ರುಜು ಹಾಕಿರುವುದನ್ನು ತಮ್ಮ ಕೈಯಲ್ಲಿ ಕೊಡುತ್ತೇನೆ, ಅದನ್ನು ತಾವು ನೋಡಿಕೊಳ್ಳಬಹುದು. We go by this only. ಊಹೆ ಮಾಡಿ ಹೇಳಿದರೆ ಏನು ಮಾಡುವುದಕ್ಕೂ ಆಗುವುದಿಲ್ಲ. I shall read the last para :

> "The Union Government will assist in arriving at such a settlement in six months and in the meanwhile no State should take any steps to make the solution of the problem difficult either by impounding or by utilising the water of Cauvery beyond what it is at present."

We are not impounding; nor are we utilising the water of Cauvery beyond what it is at present, until these projects are complete.

ಇಷ್ಟೇ ಇದರಲ್ಲಿರುವುದು. ಯಾರೋ ಏನೋ ವಾಖ್ಯಾನ ಮಾಡಿಕೊಂಡು ಹೋದರೆ ಅದರಿಂದ ಏನು ಆಗಬೇಕು ! ನಮ್ಮ ಕೆಲಸಕ್ಕೆ ಕುಂಠಿತವಾಗಬೇಕಾಗಿಲ್ಲ. ಯಾರೂ ಕೆಲಸಗಳನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅವರ ಜೊತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಯಾರು ಏನು ಮಾಡಿದರೂ ಮೈಸೂರು ಸರ್ಕಾರ ಕೆಲಸ ಮಾಡುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇಲ್ಲಿಯವರೆಗೆ ಲೀಗಲ್ಲಾಗಿ ಕಾನ್‌ಸ್ಟಿಟ್ಯೂಟ್ ಆಗಿರತಕ್ಕ ಅಗ್ರಿಮೆಂಟ್ ಮೇಲೆ ಕಾನೂನು ರೀತ್ಯ ತಮ್ಮ ವರ್ಡಿಕ್ಟ್‌ನ್ನು ಕೊಡತಕ್ಕ ಯಾವುದೇ ಒಂದು ಇನ್‌ಸ್ಟಿಟ್ಯೂಷನ್ ಅಥವಾ ಫ್ಯಾಕ್ಟ್ ಫೈಂಡಿಂಗ್ ಬಾಡಿ ಏನು ಹೇಳಬೇಕೋ ಆ ಹೇಳಿಕೆಯಾಗಲಿ, ಆಜ್ಞೆಯಾಗಲಿ ಇಲ್ಲದೆ ಇರುವಾಗ ಮೈಸೂರು ಸರ್ಕಾರ ತನ್ನ ಕಾರ್ಯವನ್ನು ಮಾಮೂಲಿನಂತೆ ನಡೆಸಿಕೊಂಡು ಹೋಗುವುದು ಅದರ ಸ್ಪಷ್ಟವಾದ ಕರ್ತವ್ಯ. ಕೆಲಸ ನಿಲ್ಲಿಸಿ ಎಂದು ಯಾರೂ ಏನು ಹೇಳಿದರೂ ಅದಕ್ಕೆ ಬೆಲೆ ಕೊಡಬೇಕಾಗಿಲ್ಲ. We go by it to the letter of the law. ಅದಕ್ಕೆ ಬೇರೆ ವ್ಯಾಖ್ಯಾನ ಮಾಡಬೇಕಾದ ಅಗತ್ಯ ಇಲ್ಲ.

Notice of a Question of Privilege over the incorrect statement made by the Minister for Municipal Administration on the purchase of Begum Mahal by the Bangalore City Corporation.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ನಗರಾಡಳಿತ ಮಂತ್ರಿಗಳಿಗೆ ಸಂಬಂಧ ಪಟ್ಟ ಎರಡು ಪ್ರಶ್ನೆಗಳು ಉಳಿದುಹೋಗಿವೆ. ಅವುಗಳನ್ನು ಡಿಮ್ಯಾಂಡ್ಸ್ ಚರ್ಚೆ ಮಾಡುವ ಕಾಲದಲ್ಲಿ ತೆಗೆದುಕೊಂಡರೆ ಸಭೆಯ ಕಾಲ ವ್ಯರ್ಥವಾಗುತ್ತದೆ ಎಂದು ಆಗ ಕೇಳಲಿಲ್ಲ. ಮಂತ್ರಿ

(ಶ್ರೀ ಎಚ್. ಡಿ. ದೇವೇಗೌಡ)

ಗಳನ್ನು ಈಗ ಕಾಯುವುದಕ್ಕೆ ಸಾಧ್ಯವಿಲ್ಲ. ಇಪ್ಪತ್ತು ಅವಧಿಯನ್ನು ಸಭೆಗೆ ಕರೆಸಿ ಇವರಿಂದ ಹೇಳಿಕೆಯನ್ನು ಕೊಡಿಸಿ. ಮುಖ್ಯಮಂತ್ರಿಗಳು ಇಲ್ಲದ್ದಾರೆ. ಅವರ ಎದುರಿಗೆ ಈ ಸಮಸ್ಯೆ ಇತ್ಯರ್ಥವಾಗಬೇಕಾಗಿದೆ. ಕಾರಣ ಇಷ್ಟೆ. ಕಾರ್ಪೊರೇಷನ್‌ನಲ್ಲಿ ನಿರ್ಣಯ ಆಗಿಹೋಗಿದ್ದರೆ ಏನು ಎಂಬ ಬಗ್ಗೆ ಚರ್ಚೆ ಬಂದಾಗ ನಾನು ಅದನ್ನು ವಿರೋಧ ಮಾಡಿ ಸಮಾಧಾನ ಪಡಿಸಿಕೊಳ್ಳುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಅವರು ಹೇಳಿದ್ದು ಅನಕ್ಷುಲಿದ್ದರೆ ಈ ಸಭೆಯ ಕ್ಷಮೆಯನ್ನು ಯಾಚನೆಮಾಡಬೇಕು. ಮಂತ್ರಿಗಳು ಈ ಸಭೆಗಿಂತ ದೊಡ್ಡವರಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಒಂದು ಪ್ರಿವಿಲೇಜ್ ಮೋಷನ್‌ನನ್ನು ಕಾರ್ಪೊರೇಷನ್ ಮೇಯರ್ ಬಗ್ಗೆ ಕೊಟ್ಟಿದ್ದೇನೆ. ಅದು ಏನಾಯಿತು ?

ಅಧ್ಯಕ್ಷರು.—ಅದು ಇರ್ಲಾ ಇದೆ. ಮಂತ್ರಿಗಳನ್ನು ಸಾಯಂಕಾಲ ಕರೆಸಿಸ್ತೀನಿ, ನಾನು ನನ್ನ ರೂಲಿಂಗನ್ನು ಕೊಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಬಹುಶಃ ರೆಸಲ್ಯೂಷನ್ ಆಗಿಹೆಯೆಂದು subsequentಆಗಿ ವರ್ತಮಾನ ಬಂದಿದೆ. I was told it was very late in the night when the resolution passed. ಮಾನ್ಯ ದೇವೇಗೌಡರು ಇಪ್ಪತ್ತಿನ ದಿವಸ ಈ ತರಹ ರೆಸಲ್ಯೂಷನ್ ಆಗಿಲ್ಲ ಎಂದು ಮಂತ್ರಿಗಳು ಹೇಳಿದ್ದಾರೆ, ಆ ರೀತಿ ಹೇಳಿದ್ದರಿಂದ ತಪ್ಪು ಹೇಳಿದ ಹಾಗಾಯಿತು, ಕರೆಕ್ಟ್ ವರ್ತಮಾನ ಕೊಡಲಿಲ್ಲ ಎಂದು ಪಾಪ ಮಾಡಿರುವುದನ್ನು ಕಳಿಯಬೇಕು.

I asked the Minister. At that moment he was giving the information that there was no such resolution. I have not looked into the records though the Speaker was pleased to have got it. The Speaker called me and some others also, to hear the recorded version.

MADAM SPEAKER.—That is about another matter.

ಶ್ರೀ ಡಿ. ದೇವರಾಜ್ ಅರಸ್.—ಇನ್ನೊಂದು ಸಾರಿ ಹೇಳುವುದು ಶ್ರೀಯುತ್ ವಾಟಾಳ್ ನಾಗರಾಜ್ ಹಾಗೂ ನಮ್ಮ ಇತರ ಸದಸ್ಯರುಗಳು ಕಾರ್ಪೊರೇಷನ್ ಎಲೆಕ್ಷನ್ ಬಗ್ಗೆ ಇಲ್ಲಿ ಮಾತನಾಡಿದ್ದಾರೆ. ಕೆಲವು ಹೇಳಿ ಕಾರ್ಪೊರೇಷನ್ ಎಲೆಕ್ಷನ್ ಬಹಳ ರೇಟಾಗಿ ನಡೆಯುವ ಒಂದು ಪದ್ಧತಿ ಬಂದಿದೆ. ಅದರಲ್ಲೂ ಬಹಳ ರೇಟಾಗಿ ಆಂಧ್ರ ಎಲೆಕ್ಷನ್ ನಡೆದು ರೆಸಲ್ಯೂಷನ್ ಪಾಸು ಮಾಡಿರಬಹುದು, ಇಲ್ಲವೇ ನಡೆಯದೇ ಇರಲೂಬಹುದು.

ಆದರೆ ಈ ರೆಸಲ್ಯೂಷನ್ ತಂದು ಪಾಸು ಮಾಡಿದ್ದಾರೋ ಇಲ್ಲವೋ ಅದು ಆಗ ಮಂತ್ರಿಗಳಿಗೆ ತಿಳಿದಿಲ್ಲದಿರಬಹುದು. ಅವರು ಉತ್ತರ ಕೊಟ್ಟಮೇಲೆ ಎಲೆಕ್ಷನ್ ನಡೆದು ರೆಸಲ್ಯೂಷನ್ ಪಾಸು ಆಗಿದೆ ಎಂದು ಅವರ ಗಮನಕ್ಕೂ ಬಂದಿರಬಹುದು. ಮೊಬಲು ಅವರು ಸರಿಯಾದ ವಿಚಾರಗಳನ್ನು ತಿಳಿಯದೇ ಇನ್‌ಕರೆಕ್ಟ್ ಇನ್‌ಫರ್‌ಮೇಷನ್ ಕೊಟ್ಟಿರಬಹುದು. ಆ ನಂತರ ಅದನ್ನು ಸರಿಪಡಿಸಿ ಇಲ್ಲಿ ಒಂದು ವಿವರಣೆ ಕೊಡಬಹುದು. ಇದರಲ್ಲಿ ಯೋಗ್ಯವಾದುದು ಯಾವುದು ಎನ್ನುವುದನ್ನು ಸದ್ಯರು ತಿಳಿಯಬೇಕು. At that distance of the time when the Minister was asked to give information he said there was no resolution. But subsequently it was found that there was resolution to that effect. What the Leader of the Opposition wants to say is, that it amounts to privilege, may be ; I do not want to go into that question. In regard to the information given, he gave it without any motive, based on the reports he got. Subsequently he found out that the report is not correct, naturally he should say, I am sorry, I became the cause to give that wrong information. There is nothing wrong. On his behalf I say this.

Sri H. D. DEVE GOWDA.—Let him come and apologise.

Sri D. DEVARAJ URS.—The House, I think, should be satisfied with my explanation. It was never the intention to give wrong information. The information was given in the circumstances [illegible]

without any motives behind it. I verified the whole thing; I feel sorry that he should have given that information. Now that it is rectified, I think the wholething has to be closed.

MADAM SPEAKER.—I think the matter is closed.

(ii) re : *The Statement of the Minister for Municipal Administration on Demolition of a House in Hosahalli Extension.*

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಈ ವಿಚಾರವಲ್ಲದೆ ಎರಡನೇ ಅಲಗೇಷನ್ ಕೂಡ ಮಾಡಿದ್ದೇನೆ. ಹೊಸಹಳ್ಳಿಯಲ್ಲಿ ಕಟ್ಟಿಸಿದ್ದ ಮನೆಯನ್ನು ಒಡಸಿಹಾಕಿದ ವಿಚಾರದ ಬಗೆಗೂ ಹೇಳಿದ್ದೆ. ಲೈಪವ್ಸ್ ಕೊಡದೇ ಮನೆ ಕಟ್ಟಿದ್ದರು, ಇದನ್ನು ಒಡೆಸಿ ಹಾಕಬೇಕು ಎಂದು ಪೈರೆಕ್ಷನ್ ಕೊಟ್ಟಿದ್ದೆ ಎಂದೂ, ಇನ್ನೂ ಇತರ ವಿಚಾರಗಳನ್ನು ಮಂತ್ರಿಗಳು ಹೇಳಿದರು. ಈಗ ಇದು ಕೋರ್ಟ್ ಮುಂದೆ ಹೋಗಿದೆ. ಆ ಎಲ್ಲ ವಿಚಾರಗಳು ಮತ್ತು ಮೆರಿಟ್ಸ್ ಬಗ್ಗೆ ನಾನೇನೂ ಹೇಳಲು ಹೋಗುವುದಿಲ್ಲ.

ಅಧ್ಯಕ್ಷರು.—ಇಂದಿನ ಸಭೆ ಮುಗಿಯುವುದರೊಳಗಾಗಿ ನಾನು ಇದರ ಫೈಲನ್ನು ತರಿಸಿ ಎಲ್ಲ ವಿಚಾರಗಳನ್ನೂ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಾರ್ಪೊರೇಷನ್‌ನವರೇ ಲೈಸನ್ಸ್ ಕೊಟ್ಟು ಪ್ಲಾನ ಮಂಜೂರು ಮಾಡಿ ಕಟ್ಟಿರುವ ಮನೆಯ ಬಗ್ಗೆ ಮಂತ್ರಿಗಳು ಹೋಗಿ ಆ ಮನೆಯನ್ನು ಒಡೆಯಲು ಆರ್ಡರು ಮಾಡಿದರು ಎಂದು ಫೈರ್‌ನಲ್ಲಿ ಇದೆ. ನಿಯಮಾವಳಿಗೆ ಅನುಸಾರವಾಗಿಯೇ ಇಲ್ಲಿ ಮನೆಯನ್ನು ಕಟ್ಟಿರುವುದು, ಇದರ ವಿಚಾರವಾಗಿ ಇಲ್ಲಿ ಹೆಚ್ಚು ಮಾತಾಡಲು ಹೋಗುವುದಿಲ್ಲ.

ಅಧ್ಯಕ್ಷರು.—ಇದರ ಬಗ್ಗೆ ಮಂತ್ರಿಗಳು ಇಲ್ಲಿ ಹೇಳಿರುವ ಸ್ಟೇಟ್ ಮೆಂಟು ಸರಿಯಾಗಿದೆಯೇ ಇಲ್ಲವೇ ಎನ್ನುವುದಕ್ಕಾಗಿ ಇದಕ್ಕೆ ಸಂಬಂಧಪಟ್ಟ ಫೈಲುಗಳನ್ನೆಲ್ಲಾ ತರಿಸಿ ನೋಡಿದ್ದೇನೆ. ಅವೆಲ್ಲ ನನ ಹತ್ತಿರ ಬಂದಿವೆ. ಅದರಂತೆ ನೋಡುವಾಗ ಮಾನ್ಯ ಮಂತ್ರಿಗಳು ಆರ್ಡರು ಮಾಡಿದಂತೆ ಇಲ್ಲಿ ಮನೆಯನ್ನು ಒಡೆಸಿ ಹಾಕಿದ್ದಾರೆನ್ನುವುದು ವ್ಯಕ್ತವಾಗುತ್ತದೆ. ಇದರಮೇಲೆ ಸಂಬಂಧ ಪಟ್ಟವರು 'ಚಾರ್ಜುಷೀಟು ಹಾಕಿ ಇದು ಈಗಾಗಲೇ ಕೋರ್ಟಿನ ಮುಂದೆ ಕೂಡ ಹೋಗಿದೆ. ಇದರ ವಿಚಾರವೆಲ್ಲಾ ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇಲ್ಲಿ ಹೇಳಿರುವ ಆರೋಪಣೆಗಳು ಆಧಾರವಿಲ್ಲದ್ದು ಎಂದು ಮಾನ್ಯ ಮಂತ್ರಿಗಳು ಇಲ್ಲಿ ಹೇಳಿದರು. ಅದಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡಿ ಕೊಂಡಿದ್ದು ತಾವೇ ಇದಕ್ಕೆ ಸಂಬಂಧಪಟ್ಟ ಫೈಲುಗಳನ್ನೆಲ್ಲಾ ತರಿಸಿ ತಮ್ಮ ಒಂದು ಅಭಿಪ್ರಾಯ ಕೊಟ್ಟರೆ ಇದು ನಿಜವೇ ಅಲ್ಲವೇ ಎನ್ನುವುದು ಈ ಸಭೆಗೆ ತಿಳಿಯುವು ಒಂದು ಅವಕಾಶ ಸಿಗುತ್ತದೆ ಆಗ ನನ್ನ ಹೇಳಿಕೆ ಸರಿ ಇಲ್ಲವೇ ಅಥವ ಸರಿಯಾಗಿದೆಯೇ ಎನ್ನುವುದು ತಿಳಿಯುತ್ತದೆ. ಕಾನೂನು ಬಾಹಿರ ವಾಗಿ ಮನೆ ಕಟ್ಟಿದ್ದರೇ ಇಲ್ಲವೇ ಎನ್ನುವದು ಕೋರ್ಟಿನ ಮುಂದೆ ತೀರ್ಮಾನವಾಗುತ್ತದೆ, ನಾನು ಅದರ ವಿವರಗಳ ಬಗ್ಗೆ ಹೋಗುತ್ತಿಲ್ಲ. ಮಾನ್ಯ ಮಂತ್ರಿಗಳು ಅಪ್ಪಣೆ ಮೇರೆ ಕಾರ್ಪೊರೇಷನ್‌ನರು ಇಲ್ಲಿ ಮನೆ ಒಡೆದು ಹಾಕಿದ್ದಾರೆ, ಇದನ್ನು ತಾವು ಫೈಲು ತರಿಸಿ ನೋಡಿದರೆ ತಮಗೆ ವಿಷಾಂಶ ಗೊತ್ತಾಗುತ್ತದೆ.

ಅಧ್ಯಕ್ಷರು.—ಟ್ರಸ್ಟ್ ಬೋರ್ಡ್ ಸೈಟಿನ ಮೇರೆ ಹೊಸಹಳ್ಳಿಯಲ್ಲಿ ಮನೆ ಕಟ್ಟಿದ್ದರು. ಅದನ್ನು ಕಾರ್ಪೊರೇಷನ್‌ನವರು ಒಡೆಸಿ ಹಾಕಲು ಸರಕಾರದವರು ಆರ್ಡರು ಮಾಡಿದರು ಎಂದು ಹೇಳುತ್ತಿದ್ದೆ. ಇದನ್ನು ಏಕೆ ಒಡೆದರು, ಇದರಲ್ಲಿ ಟ್ರಸ್ಟು ಬೋರ್ಡಿನವರು ಮನೆ ಕಟ್ಟಲು ಹೇಗೆ ಅವಕಾಶ ಕೊಟ್ಟರು ಎನ್ನುವುದು ಇದೆರಲ್ಲಾ ಕೋರ್ಟಿಗೆ ಹೋಗಿದೆ. ಅಲ್ಲಿ ಅದು ಅಂತಿಮವಾಗಿ ತೀರ್ಮಾನವಾಗುವ ವಿಚಾರ. ಇದರ ಬಗ್ಗೆ ಆರ್ಡರು ಮಾಡಿರುವ ಫೈರ್ ನನ್ನ ಹತ್ತಿರ ಬಂದಿರು ವುದೇ ಅಂಶ ಗೊತ್ತಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಬಂಧಪಟ್ಟ ಮಂತ್ರಿಗಳು ಬಂದು ಇಲ್ಲಿ ವಿವರ ಕೊಡಲಿ.

ಅಧ್ಯಕ್ಷರು.—ಸಂಬಂಧಪಟ್ಟ ಇದರ ಫೈಲುಗಳೆಲ್ಲಾ ನನ್ನ ಹತ್ತಿರ ಬಂದಿವೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಇಲ್ಲಿ ಒಂದು ಹೇಳಿಕೆ ಕೊಡುತ್ತಾ ನಾನು ಮಾಮೂಲನಂತೆ ಇನ್‌ಸ್‌ಪೆಕ್ಷನ್‌ಗೆ ಹೋದಾಗ ಇದು ನನ್ನ ಗಮನಕ್ಕೆ ಬಂತು. ಆಗ ಇದರ ಬಗ್ಗೆ ಕಾರ್ಪೊರೇಷನ್ ಅಧಿಕಾರಿಗಳಿಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟೆ ಎಂದು ಹೇಳಿದರು. ಮಂತ್ರಿಗಳೇ ಆರ್ಡರು ಮಾಡಿ ಒಡೆಸಿದರು ಎಂದು ಫೈರ್‌ನಲ್ಲಿ ಇದೆ.

ಅಧ್ಯಕ್ಷರು.—ಅವರು ಆರ್ಡರು ಮಾಡಿದರು ಎಂದು ಇದೆ.

The Minister after spot inspection has ordered demolition.....

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇದರ ಜೊತೆಯಲ್ಲಿ ಹೇಳಿದ ಇನ್ನೊಂದು ಮುಖ್ಯ ವಿಚಾರ ಎಂದರೆ ಈ ಮನೆಯ ಜೊತೆಯಲ್ಲೇ ಇನ್ನೂ 28 ಮನೆಗಳು ಇದ್ದವು. ಇದೊಂದು ಮನೆ ಮಾತ್ರ ನಿರ್ದಿಷ್ಟವಾಗಿ ಏಕೆ ಒಡೆಸಬೇಕಾಗಿತ್ತು. ಎಲ್ಲಾ ಮನೆಗಳನ್ನೂ ಕಾರ್ಪೊರೇಷನ್ ನಿಯಮಾವಳಿಗೆ ವಿರೋಧವಾಗಿ ಕಟ್ಟಿದ್ದರೂ ಆ ಮನೆಗಳ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮತ್ತು ಇಲ್ಲಿ ಮಂತ್ರಿಗಳೇ ನಿಂತು ಈ ಮನೆಯನ್ನು ಒಡೆಸಿದರು ಎಂದು ಗೊತ್ತಾಗಿದೆ. ಇದು ತಪ್ಪಾಗುವುದಿಲ್ಲವೇ? ಮಾನ್ಯ ಮಂತ್ರಿಗಳು ಅವರು ಇನ್‌ಸ್‌ಪೆಕ್ಷನ್ ಮಾಡಲು ಹೋದಾಗ ಕಂಡು ಬಂತು, ಆಗ ಇದರ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಟ್ಟೆ ಎಂದು ಇಲ್ಲಿ ಹೇಳಿದ್ದಾರೆ. ಹೀಗೆ ಇವರು ಹೇಳುವ ಹೇಳಿಕೆಗಳಲ್ಲೇ ಒಂದಕ್ಕೊಂದು ವ್ಯತ್ಯಾಸ ಇದೆ. ಹಾಗೆ ಕ್ರಮ ತೆಗೆದುಕೊಳ್ಳುವುದಿದ್ದರೆ ಇಲ್ಲಿರುವ ಎಲ್ಲ ಮನೆಗಳ ಮೇಲೂ ತೆಗೆದುಕೊಳ್ಳಬಹುದಾಗಿತ್ತು. ಒಂದೇ ಮನೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದು ಸರಿಯಲ್ಲ. ಫೈರ್‌ನಲ್ಲಆರ್ಡರ್ ಮಾಡಿದ್ದಾರೆಂದು ತಾವು ಈಗ ತಾನೆ ಹೇಳಿದಿರಿ. ಆದರೆ ಮಾನ್ಯ ಮಂತ್ರಿಗಳು ಸಭೆಯಲ್ಲಿ ಹೇಳಿದ್ದೇ ಬೇರೆ. ಆ ರೀತಿ ಮಾಡಿದ್ದು ಅವರಿಗೆ ಯೋಗ್ಯವಾಗಿಲ್ಲ ಎಂಬುದೇ ನನ್ನ ಅಪಾದನೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಬಸವಲಿಂಗಪ್ಪನವರು ತಿಳಿಸಿದ್ದಕ್ಕೂ ಈಗ ಮಾನ್ಯ ಅಧ್ಯಕ್ಷರು ತಿಳಿಸಿದ್ದರೂ ವ್ಯತ್ಯಾಸವಿದೆ ಎಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿ ತೋರಿಸಿದ್ದಾರೆ. ಮಾನ್ಯ ಅಧ್ಯಕ್ಷರು ಹೇಳಿದ ಪ್ರಕಾರ ಮನೆಯನ್ನು ಕೆಡವಬೇಕೆಂದು ಮಾನ್ಯ ಮಂತ್ರಿಗಳೇ ಆರ್ಡರ್ ಮಾಡಿದ್ದಾರೆಂದು ತಿಳಿದುಬಂತು. ಆದರೆ ಹಿಂದೆ ಇದೇ ಮಾನ್ಯ ಮಂತ್ರಿಗಳು, ಈ ಸಭೆಗೆ ಕೊಟ್ಟ ಹೇಳಿಕೆಯೇ ಬೇರೆಯಾಗಿತ್ತು. ಇದರಿಂದಲೇ ಗೊತ್ತಾಗುತ್ತದೆ, ಈ ಸಭೆಯ ಹಕ್ಕಿಗೆ ಚ್ಯುತಿ ಬರುವ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ ಎಂಬುದು. ಅವರು ಸಭಾನಾಯಕರಾಗಿರುವುದರಿಂದ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. ಅಸತ್ಯ ಸಂಗತಿಯನ್ನು ಸಭೆಗೆ ತಿಳಿಸಿ ಇಡೀ ಸಭೆಯನ್ನೇ ತಪ್ಪು ದಾರಿಗೆ ಎಳೆದಿದ್ದಾರೆ. ಮಾನ್ಯ ಮಂತ್ರಿಗಳು ಸಭೆಯ ಘನತೆ ಗೌರವವನ್ನು ಹಾಳು ಮಾಡಿರುವುದರಿಂದ ಅವರ ವಿರುದ್ಧ ಬ್ರೀಚ್ ಆಫ್ ಪ್ರಿವಿಲೇಜ್‌ಗೆ ಸೂಚನೆಯನ್ನು ಯಾವ ರೀತಿ ತರಬೇಕೋ ಆ ರೀತಿ ನಾವು ತರುತ್ತೇವೆ. ಅಧ್ಯಕ್ಷರು ಅದನ್ನು ಪರಿಗಣನೆಗೆ ತೆಗೆದುಕೊಂಡು ಅದಕ್ಕೆ ಮಾನ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri D. DEVARAJ URS.—Madam Speaker, I can't understand as to why there should be repeatation of what has been already stated. If the hon. member wants to raise the issue as a breach of privilege let him do it according to rules.

Sri C. M. ARUMUGUM.—Since the information contained in the file has been revealed by the Hon. Speaker the House is ceased of this matter. I would like to know as to what the order is—whether the order is to dismantle a particular house or in general; secondly, how that order appear in the Corporation file; whether that file is maintained by the Government in the Secretariat or in the Corporation; whether the said order was communicated to the Commissioner? These are the points on which I would like to have information. Further it would be in fitness of things to allow other hon. members to express their views on the matter. Hon. Leader of Opposition Sri Deve Gowda stated that this house was dismantled with political motive. You

have stated that the other issue with regard to Basavalingappa's house is before the Court. When the matter is before the court, to what extent, this House has a right to discuss that issue ? I want the Chair to furnish information on these points also.

ಶ್ರೀ ವಾಟಾಳ್ ನಾಗರಾಜ್.—ಇದರಲ್ಲಿ ಎರಡು ಪ್ರಶ್ನೆಗಳಿವೆ. ಹೊನಹಳ್ಳಿಯಲ್ಲಿ ಗುಡಿಸಲುಗಳನ್ನು ಕಿತ್ತುಹಾಕಿ, ಗುಡಿಸಲುವಾಸಿಗಳು ನತ್ಯಾಗ್ರಹ ಮಾಡಿದ್ದು ಒಂದನೆಯದಾದರೆ, ಎರಡನೆಯದು ಕಟ್ಟಿದ್ದ ಮನೆಯನ್ನು ಒಡೆಸಿಹಾಕಿದ್ದು. ಮತ್ತೊಂದು ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಏನೆಂದರೆ ಕಾರ್ಪೊರೇಷನ್‌ನಲ್ಲಿ ಯಾವ ರೀತಿ ನಿರ್ಣಯಗಳಾಗುತ್ತವೆ ಎಂಬುದನ್ನು. ರಾತ್ರಿ 8 ಗಂಟೆಯ ನಂತರ ಯಾವುದನ್ನೂ ಅಳವಾಗಿ ಅಭ್ಯಾಸ ಮಾಡದೆ ಅತುರಾತುರವಾಗಿ ಪಾಸ್ ಮಾಡಿಬಿಡುತ್ತಾರೆ. ಮೇಯರ್ ಅವರು ಕಾರ್ಪೊರೇಟರ್‌ಗಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬುದನ್ನು ಸಹ ಬೆಂಗಳೂರು ಸಿಟಿಯ ಎಂ. ಎಲ್. ಎ. ಗಳು ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ರೆಪ್ರಸೆಂಟ್ ಮಾಡಿದ್ದೇವೆ.

ಅಧ್ಯಕ್ಷರು.—ಇಲ್ಲಿ ಮೇಯರ್ ಪ್ರಶ್ನೆ ಬಂದಿಲ್ಲ. ನಿಮಗೆ ಯಾರ ಮೇಲೆ ಕೋಪ ಇದೆಯೋ ಅದಕ್ಕೂ ಈ ಹೌಸ್‌ಗೂ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಯಾವ ರೀತಿ ಸಂಬಂಧ ಇದೆ ಎಂಬುದನ್ನು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ದೇವೇಗೌಡರು ಮತ್ತು ಮಾನ್ಯ ಆರ್ಮುಗಂ ಅವರು ಮಾತನಾಡಿದ್ದಾರೆ. ಅದಕ್ಕೆ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ವಾಟಾಳ್ ನಾಗರಾಜ್.—ಮನೆಯನ್ನು ಒಡೆದುಹಾಕಿದ ಬಗ್ಗೆ ಮಾನ್ಯ ದೇವೇಗೌಡರಿಗಿಂತಲೂ ಹೆಚ್ಚಿನ ವಿಷಯ ನನಗೆ ಗೊತ್ತಿದೆ. ಅದರ ಬಗ್ಗೆ ಎಲ್ಲ ಅಂಕ ಅಂಶಗಳೂ ನನ್ನ ಹತ್ತಿರ ಇದೆ. ಅದರ ಫೈರ್‌ನ್ನು ನಾನು ನಾಳೆ ಬೇಕಾದರೆ ತರುತ್ತೇನೆ.

ಅಧ್ಯಕ್ಷರು.—ತಾವು ಎಲ್ಲವನ್ನೂ ಮಿಕ್ಸ್ ಮಾಡಿ ಚರ್ಚೆ ಮಾಡುತ್ತಿದ್ದೀರಿ. ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ನೀವು ಪಾಯಿಸ ಮಾಡುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ಎರಡು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ಮನೆಯನ್ನು ಒಡೆದುಹಾಕುವುದಕ್ಕೆ ಆರ್ಡರ್ ಮಾಡಿದ್ದಾರೆಂದು ತಾವು ಈಗ ಹೇಳಿದಿರಿ. ಹಿಂದೆ ಮಾನ್ಯ ಮಂತ್ರಿಗಳು ಇಲ್ಲಿ ಅದರ ಬಗ್ಗೆ ಹೇಳಿಕೆ ಕೊಡುತ್ತಾ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಬಾಯಲ್ಲಿ ಹೇಳಿದೆ ಎಂದು ಹೇಳಿದ್ದರು. ಆ ರೀತಿ ಬಾಯಲ್ಲಿ ಹೇಳಿದ್ದನ್ನು ಬರಹದಲ್ಲಿಯೂ ಆರ್ಡರ್ ಮಾಡಿದ್ದಾರೆಯೇ ಎಂಬುದು ಒಂದು ಪ್ರಶ್ನೆ; ಆ ರೀತಿ ಆರ್ಡರ್ ಮಾಡುವಾಗ ಒಂದೇ ಮನೆಗೆ ಆರ್ಡರ್ ಮಾಡಿದ್ದಾರೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಮನೆಗಳನ್ನು ಒಡೆದು ಹಾಕ ಎಂದು ಆರ್ಡರ್ ಮಾಡಿದ್ದಾರೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಇನ್ನೊಂದು ಪ್ರಶ್ನೆ ಏನೆಂದರೆ ಈ ಕೇಸು ಈಗ ಕೋರ್ಟ್ ಮುಂದೆ ಇದೆ. ಆದ್ದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ Whether this action of ordering of demolition of the house is proper or not is a matter with which we are concerned.

Sri D. DEVARAJ URS.—I don't think there is need to debate upon this matter. It is not at all a big affair and we need not exercise our mind over a limited issue like this. I believe Mr. Deve Gowda wanted to point out that the allegation he made had some basis. Many a time during discussions in this House certain things are said to which we say they are right or they are wrong.

(SRI D. DEVARAJ URS)

3-30 P.M.

Sri Deve Gowda wanted to point out that a house of a Minister was constructed without a licence. The Minister said :' No—I have got authority to construct'. Now that the matter has gone to a Court, nothing can be said unless the Court orders or gives a judgement either for or against. Then we will come to know whether the person who built the house has built it without authority or with authority. Many a time applications are made and sometimes licences are not granted in time. They say that after a certain period the person has a right to build. There may be so many other circumstances. Apart from that, till the Court gives its judgement none of us are in a position to say that what the Minister has done is right or wrong. Let us leave it at that.

I may straight away say that if the hon. member or members were to hold the particular action of the Government is politically motivated, we can at best say what our motives are and try to convince them. But, still if they feel that it is politically motivated, how can I help it ? The fact does remain that there was a house constructed without licence, illegally on a plot which does not belong to a person who constructed the house. There is nothing wrong as long as the Government Order or the action is within the four corners of the rules and regulations. It was stated there are 10,000 houses in Bangalore Corporation area constructed without licence and if you demolish this house why not those 10,000 houses also. Who says No ! Legally it is correct.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮಾಡಿದ ಆರೋಪಣೆಗೆ ಸಾಕ್ಷಿ, ಇದೆ ಎಂದಾಯಿತು. ಅನಧಿಕೃತವಾಗಿ ಕಟ್ಟಿಸಿದ ಅನೇಕ ಮನೆಗಳು ಬಿಲ್ಲಿ ಇರುವಾಗ ಅದು ಒಂದನ್ನೇ ಏತಕ್ಕೆ ಕೆಡವಿಸಿದ್ದು ?

ಶ್ರೀ ಡಿ. ದೇವರಾಜ ಅರಸ್.—ಇದು ಹೇಗಿದೆ ಎಂದರೆ ಈಗ ಒಬ್ಬ ಕಳ್ಳತನ ಮಾಡುವವನು ಪೋಲೀಸಿನವರ ಕೈಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಅವನನ್ನು ಹಿಡಿದುಕೊಂಡಾಗ ನನ್ನ ಹಾಗೆ ಕಳ್ಳತನ ಮಾಡುವವರು ಎಷ್ಟೋ ಜನ ಇದ್ದಾರೆ, ನನ್ನನ್ನೇ ಏತಕ್ಕೆ ಹಿಡಿದುಕೊಂಡಿರಿ ಎಂದು ಹೇಳಿದ ಹಾಗಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳೇ, ತಾವು ತಮ್ಮ ಸಹೋದ್ಯೋಗಿಗಳು ಮಾಡತಕ್ಕಂಥಾ ತಪ್ಪನ್ನು ಸಮರ್ಥನೆ ಮಾಡಬೇಡಿ. ತಮ್ಮ ಸಹೋದ್ಯೋಗಿಗಳಿಗೆ ಈ ರೀತಿ ವ್ಯವಹಾರಮಾಡುವುದನ್ನು ಇನ್ನು ಮುಂದಾದರೂ ನಿಲ್ಲಿಸಿ ಎಂದು ಹೇಳಿ, ಸರ್ಕಾರ ಕೈಗೊಳ್ಳುವ ಕ್ರಮ ಸಾಮೂಹಿಕವಾಗಿರಬೇಕೇ ಹೊರತು ಯಾವುದೇ ವ್ಯಕ್ತಿಯ ದೃಷ್ಟಿಯಿಂದ ನಿರ್ಣಯ ತೆಗೆದುಕೊಳ್ಳುವುದು ಯೋಗ್ಯವಲ್ಲ. ಈ ಕೊನಹಳ್ಳಿಯ ಮನೆಗೆ ಸಂಬಂಧಪಟ್ಟ ಫೈಲನ್ನು ಮಂತ್ರಿಗಳು ತರಿಸಿ ಅದನ್ನು ಒಡೆಯಬೇಕೆಂದು ಆರ್ಡರ್ ಮಾಡಿರುವುದು ಸರಿಯಲ್ಲ. ಮತ್ತು ಯೋಗ್ಯವಾದದ್ದಲ್ಲ. ಕಾನೂನು ರೀತ್ಯಾ, ಮತ್ತು ವ್ಯವಹಾರ ದೃಷ್ಟಿಯಿಂದ ಇದು ಯೋಗ್ಯವಲ್ಲ. ಆ ಮನೆಯ ಮಾಲೀಕನ ಮೇಲೆ ಆಕ್ರೋಶ ಇಟ್ಟುಕೊಂಡು ಮಂತ್ರಿಗಳು ಆ ರೀತಿ ಮಾಡಿದ್ದಾರೆ. ಆ ರೀತಿ ಮಂತ್ರಿಗಳು ಮಾಡಿದ್ದನ್ನು ಸಮರ್ಥನೆ ಮಾಡುವ ದೃಷ್ಟಿಯಿಂದ ಹೇಳುವುದಾದರೆ ನಾನು ಅದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೇ ಬಿಡುತ್ತೇನೆ. ಈ ರೀತಿ ಮಾಡುವುದರಿಂದ ಗೌರವ ಬರುವುದಿಲ್ಲ. ಇದು ಸರ್ಕಾರಕ್ಕೂ ಭೂಷಣವಲ್ಲ. ಇದರ ತೀರ್ಮಾನವನ್ನು ಜನತೆಯು ಮಾಡುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಈಗ ನನ್ನ ಒಂದು ಸಲಹೆ ಏನೆಂದರೆ ಕಾರ್ಪೊರೇಷನ್‌ನಲ್ಲಿ ಮನೆಯ ಪ್ಲಾನ್ ಸ್ಯಾಂಕ್ಷನ್ ಮಾಡಬೇಕಾದರೆ ಆ ಪ್ಲಾನಿನ ಒಂದು ನಕಲನ್ನ ಕಾರ್ಪೊರೇಷನ್ ಆಫೀಸಿನಲ್ಲಿ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಕಾರ್ಪೊರೇಷನ್‌ನವರು ಪ್ಲಾನನ್ನು ಮಂಜೂರು ಮಾಡಿ ಮಾನ್ಯ ಮಂತ್ರಿಗಳಿಗೆ ಕೊಟ್ಟಂತಹ ಪ್ಲಾನಿನ ನಕಲು ಮಂತ್ರಿಗಳ ಹತ್ತಿರ ಇದೆ. ಅವನ್ನೂ ಮತ್ತು ಕಾರ್ಪೊರೇಷನ್‌ನಲ್ಲಿ ಇರುವ ಅವರ ಮನೆಯ ಪ್ಲಾನಿನ ನಕಲನ್ನು ತಾಳೆ ನೋಡಬಹುದು.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಮಾಡುವುದಕ್ಕಾಗುವುದಿಲ್ಲ. When the matter is before the court how can I do that? We shall not discuss this at all. Anything said here might amount to *sub judice*. So, let us not discuss about that point.

ಅಧ್ಯಕ್ಷರು.—ಶ್ರೀಮಾನ್ ದೇವೇಗೌಡರು ತಮ್ಮ ಅಪಾದನೆಗಳಿಗೆ ಸಂಬಂಧಿಸಿದ ಫೈಲನ್ನು ತರಿಸಿನೋಡಿ ಎಂದು ಹೇಳಿದ್ದರು. ಅವರು ಹೇಳಿದ ಹಾಗೆ ಆ ಫೈಲನ್ನು ತರಿಸಿನೋಡಿ ಆ ಇನ್‌ಫರ್‌ಮೇಷನ್ ಅನ್ನು ನಾನು ಹೇಳಿದೆ. I cannot go further than this, I close this matter at this stage.

Ruling of the Speaker

re : *Notice of a Question of Privilege of Sri Vatal Nagaraj over the Mayor Bangalore City Corporation*

ಅಧ್ಯಕ್ಷರು.—ಜೂನ್ ತಿಂಗಳು 30ನೆಯ ತಾರೀಖು ಶ್ರೀ ಮಾನ್ಯ ವಾಟಾಳ್ ನಾಗರಾಜ್ ಅವರು ಬೆಂಗಳೂರು ಸಿಟಿ ಕಾರ್ಪೊರೇಷನ್ ಸಭೆಯಲ್ಲಿ ಈ ಸಭೆಯಲ್ಲಿ ನಡೆದಂತಹ ಪ್ರೊಸೀಡಿಂಗ್ಸ್ ಬಗ್ಗೆ ಮಾತನಾಡಿದ್ದರು, ಆದ್ದರಿಂದ ಅದು ಪ್ರಿವಿಲೇಜ್ ಪ್ರಶ್ನೆ ಆಗುತ್ತದೆ ಎಂದು ಒಂದು ಪ್ರಿವಿಲೇಜ್‌ಮೋಷನ್ ಕಳುಹಿಸಿದ್ದರು. ಮತ್ತು ಕಾರ್ಪೊರೇಷನ್ ಸಭೆಯಲ್ಲಿ ನಡೆದಂತಹ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಟೇಪ್ ರೆಕಾರ್ಡನ್ನು ತರಿಸಿ ನೋಡಿ ಎಂದು ಹೇಳಿದ್ದರು. ಅದರಂತೆ ನಾವು ಆ ಟೇಪ್‌ರೆಕಾರ್ಡನ್ನು ತರಿಸಿ ಅದನ್ನು ಪ್ಲೇ ಮಾಡಿ ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಇನ್ನು ಕೆಲವು ಮಾನ್ಯ ಸದಸ್ಯರು ಅದನ್ನು ಕೇಳಿದೆವು. ಅಲ್ಲದೆ ಕಾರ್ಪೊರೇಷನ್ ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಪ್ರೊಸೀಡಿಂಗ್ಸ್ ಅನ್ನು ಕೂಡ ತರಿಸಿ ನೋಡಿದೆವು. ಈ ಸಭೆಗೆ ರಿಫ್ಲೆಕ್ಟ್ ಆಗತಕ್ಕಂಥಾ ಒಂದು ಸ್ಟೇಟ್‌ಮೆಂಟ್ ಕೂಡ ಅದರಲ್ಲಿ ಇಲ್ಲ, ಆದ್ದರಿಂದ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಕಳುಹಿಸಿದ ಹಕ್ಕುಬಾಧ್ಯತಾ ನಿರ್ಣಯವನ್ನು ನಾನು ತಳ್ಳಿಹಾಕಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್.—ಈ ಸಭೆಯಲ್ಲಿ ಮಾನ್ಯ ಸದಸ್ಯರು ಯಾರಾದರೂ ಮಾತನಾಡಿದ ಭಾಷಣದ ಮೇಲೆ ಬೇರೆ ಯಾವುದೇ ಸಭೆಯಲ್ಲಿ ಈ ಭಾಷಣವನ್ನು ತಿರಸ್ಕರಿಸಿ ಮಾತನಾಡಬಹುದೇ ? ಟೀಕೆ ಮಾಡಬಹುದೇ ! ಈ ಸಭೆಯ ಸದಸ್ಯರ ಮೇಲೆ ಆರೋಪಣೆ ಮಾಡುತ್ತಾರೆ. ಅವರು ಆ ರೀತಿ ಟೀಕೆ ಮಾಡಬಹುದೇ ಹೇಗೆ, ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಈ ಬಗ್ಗೆ ಬೇಕಾದಷ್ಟು ರೂಲಿಂಗ್‌ಗಳು ಇವೆ. ಬೇಕಾದರೆ ತರಿಸಿ ಕೊಡಲೇ. ತಾವು ಅದನ್ನು ಓದಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈಗ ತಾವು ಹೇಳಿದಿರಿ ಈ ಮನೆಯನ್ನು ಕೆಡವಿಸಲು ಮಾನ್ಯ ಮಂತ್ರಿಗಳಾದ ಬನವಲಿಂಗಪ್ಪನವರು ಆರ್ಡರ್ ಮಾಡಿದ್ದರು ಎಂದು. ಆದರೆ ಈ ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬನವಲಿಂಗಪ್ಪನವರು ಈ ಸಂಬಂಧದಲ್ಲಿ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಕೊಟ್ಟಾಗ ಅವರು ಆರ್ಡರು ಮಾಡಿದಂಥಾದ್ದನ್ನು ಈ ಸದನದಲ್ಲಿ ಹೇಳಲಿಲ್ಲ. ಅದನ್ನ ಅವರು ಮುಚ್ಚಿಡಲು ಪ್ರಯತ್ನ ಮಾಡಿದರು. ಆದ್ದರಿಂದ ಅದು ಈ ಸಭೆಯ ಹಕ್ಕಿಗೆ ಚ್ಯುತಿ ಬಂದಿದೆ.

Sri D. DEVA RAJ URS.—I rise to a point of Order. This is not the way the House should proceed. The Hon. Member (Sri Bangarappa) has raised this issuse just now. He said that he would raise a Privilege motion. The Hon. Member has every right to send a motion in accordance with the Rules. But he should not go on making a statement pertaining to the issue.

* * *

Scarcity of Kerosene in Bangalore

Sri C. M. ARUMUGAM (K. G. F.).—I would like to bring the Notice of the Hon. Speaker that the question of scarcity of Kerosene was raised in this House about two days ago and the concerned Minister had agreed to make a statement today. If the Hon. Minister is ready with the statement, she may be called upon to make a statement.

MADAM SPEAKER.—The Hon. Minister of State for Food and Civil Supplies has written me a letter saying that she would make a statement today evening.

Sri C. M. ARUMUGAM.—If the statement is ready, she may be permitted to make the statement. At the fag end of the day, we will be tired too much and we will not be in a mood then.

MADAM SPEAKER.—It is the duty of the hon. Members to be present in the House. We will proceed to the next subject on Agenda.

Presentation of the Report of the Committee on Private Member's Bills and Resolutions

PRESENTATION

Sri B. P. KADAM (Deputy Speaker).—Madam Speaker, I beg to present the Second Report of the Committee on Private Members' Bills and Resolutions.

MADAM SPEAKER.—The Report is presented.

Sri D. B. KALMANKAR (Afzalpur).—I beg to move :

"That this Assembly agrees with the Second Report of the Committee on Private Members' Bills and Resolutions."

MADAM SPEAKAR.—The question is :

"That this Assembly agrees with the Second Report of the Committee on Private Members' Bills and Resolutions."

The motion was adopted.

*** The matter expunged as Ordered by the Chair.